# ಕಿಶೋರ್ 50!

**ಕಿಶೋರ್ ಇರುವುದೇ ಹಾಗೆ. ಅಜಾನುಬಾಹು ದೇಹಕ್ಕೆ ಅರ್ಧ ತೋಳಿನ ಶರ್ಟು, ಅರ್ಧಂಬರ್ಧ ಗಡ್ಡ, ಅರ್ಧ ಬೋಳಾದ ತಲೆ, ಕಾಲಿಗೆ ಚಪ್ಪಲಿ, ಹೆಗಲಿಗೊಂದು ಚೀಲ. ಸ್ನೇಹಮಯ ನಗು.**



'ಓಹ್! ಬನ್ನಿ ಸಾರ್. ಬನ್ನಿ ಮುಂದ್ಗಡೆ ಕುಳಿತ್ಕೊಳ್ಳಿ...'

'ಏ.. ಬೇಡ ಸಾರ್. ಇಲ್ಲೇ ಕೂತಿರ್ತೀನಿ..'

'ಇಲ್ಲ... ನೀವು ನಮ್ಮ ಚೀಫ್ ಗೆಸ್ಟ್. ಮುಂದಿನ ಸಾಲಲ್ಲಿ ನಿಮಗೆ ಕುರ್ಚಿ ಹಾಕಿದ್ದೀವಿ...'

'ಇರ್ಲಿ ಬಿಡಿ ಸಾರ್. ಇಲ್ಲೇ ಚೆನ್ನಾಗಿದೆ...'

–ಸಮಾರಂಭವೊಂದಕ್ಕೆ ಸದ್ದಿಲ್ಲದೆ ಬಂದು ಪ್ರೇಕ್ಷಕರ ನಡುವೆ ಕುಳಿತ ಕಿಶೋರ್ ಮತ್ತು ಸಂಘಟಕರ ನಡುವಣ ಮಾತುಕತೆ ಇದು. ವೇದಿಕೆ ಮೇಲೆ ಪ್ರಾಣೇಶ ಕುಲಕರ್ಣಿಯವರು ನಗೆಬಾಂಬ್ ಸ್ಫೋಟಿಸುತ್ತಿದ್ದರು. ಅದು ಮುಗಿದ ಬಳಿಕ ಬಹುಮಾನ ವಿತರಣಾ ಸಮಾರಂಭ. ಕಿಶೋರ್ ಮುಖ್ಯ ಅತಿಥಿ.

–ಕಿಶೋರ್ ಇರುವುದೇ ಹಾಗೆ. ಅಜಾನುಬಾಹು ದೇಹಕ್ಕೆ ಅರ್ಧ ತೋಳಿನ ಶರ್ಟು, ಅರ್ಧಂಬರ್ಧ ಗಡ್ಡ, ಅರ್ಧ ಬೋಳಾದ ತಲೆ, ಕಾಲಿಗೆ ಚಪ್ಪಲಿ, ಹೆಗಲಿಗೊಂದು ಚೀಲ. ಸ್ನೇಹಮಯ ನಗು. ಈವರೆಗೆ ನಟಿಸಿದ (ಈಗ ಚಿತ್ರೀಕರಣ ನಡೆಯುತ್ತಿರುವುದೂ ಸೇರಿ) ಸಿನಿಮಾಗಳ ಸಂಖ್ಯೆ 50 ದಾಟಿದೆ! ಅದರಲ್ಲಿ ಕನ್ನಡದ್ದು 24, ತಮಿಳಿನದ್ದು 18, ತೆಲುಗಿನದ್ದು 7 ಮತ್ತು ಮಲಯಾಳಂನದ್ದು ಒಂದು! ಅರ್ಧಶತಕ ತಲುಪಿದರೂ 'ಹೀರೋಯಿಸಂ' ಕಿಶೋರ್ ತಲೆಗೆ ಹತ್ತಿಲ್ಲ. ಕಾಲೇಜಿನಲ್ಲಿದ್ದಾಗ 'ದಾದಾಗಿರಿ' ಮಾಡಿದ್ದರೂ ಚಿತ್ರರಂಗದಲ್ಲಿ ಸರಳ ಸಜ್ಜನಿಕೆಯ ವ್ಯಕ್ತಿ.

'ಜಟ್ಟ' ಮತ್ತು 'ಅಟ್ಟಹಾಸ' ಚಿತ್ರಗಳಲ್ಲಿ ಕಿಶೋರ್ ಅಭಿನಯ ನೋಡಿದವರು ಬಹುಶಃ ಯಾವತ್ತೂ ಮರೆಯಲಿಕ್ಕಿಲ್ಲ. ಜಟ್ಟ ವಿಮರ್ಶಕರನ್ನು ಮಾತ್ರ ಮರುಳು ಮಾಡಿದರೆ, ಅಟ್ಟಹಾಸ 'ಸಿಳ್ಳೆ'ಖ್ಯಾತರ ಮೆಚ್ಚುಗೆ ಗಳಿಸಿತು.

ಕಿಶೋರ್ ಸದ್ಯಕ್ಕೆ ಮೂರೂ ಭಾಷೆಗಳಲ್ಲಿ ಬೇಡಿಕೆಯ ನಟ. 'ವಾಸ್ಕೋಡಿಗಾಮ' ಎನ್ನುವುದು ಕಿಶೋರ್ ನಟಿಸುತ್ತಿರುವ ಹೊಸ ಕನ್ನಡ ಚಿತ್ರದ ಹೆಸರು. ಚಿತ್ರದ ನಾಯಕ ಬದುಕಿನಲ್ಲಿ ಹೊಸ ದಾರಿ ಹುಡುಕಿಕೊಂಡು ಹೊರಡುತ್ತಾನೆ. ಶಿಕ್ಷಣ ವ್ಯವಸ್ಥೆಯ ಹೊಸ ಸಾಧ್ಯತೆಯ ಬಗ್ಗೆ ಗಂಭೀರವಾದ ಹುಡುಕಾಟ ಅದು; ಆದರೆ ತೆರೆಯ ಮೇಲೆ ಸಖತ್ ಕಾಮಿಡಿ! ಮಧುಚಂದ್ರ ನಿರ್ದೇಶನದ ಈ ಸಿನಿಮಾದ ಬಗ್ಗೆ ಕಿಶೋರ್‌ಗೆ ಸಾಕಷ್ಟು ಭರವಸೆ ಇದೆ.

ಕಿಶೋರ್ ನಟಿಸುತ್ತಿರುವ ಇನ್ನೊಂದು ಚಿತ್ರ – ಅಕ್ಟೋಪಸ್. ಇದು ಕನ್ನಡ ಮತ್ತು ತಮಿಳು ಎರಡೂ ಭಾಷೆಗಳಲ್ಲಿ ಬರುತ್ತಿದೆ. ಥ್ರಿಲ್ಲರ್ ಮತ್ತು ಮಿಸ್ಟರಿ ಜತೆಗಿರುವ ಕಥೆ. ತೆಲುಗಿನಲ್ಲಿ 'ರಾಜಾ ರಾಕೆಟ್' ಎನ್ನುವ ಚಿತ್ರದಲ್ಲಿ ಕಿಶೋರ್‌ಗೆ ಪ್ರಮುಖ ಪಾತ್ರವಿದೆ. 'ಯಾತ್ರಿಗನ್' ಎನ್ನುವ ಇನ್ನೊಂದು ತಮಿಳು ಚಿತ್ರದಲ್ಲೂ ನಾಯಕ. ಅದು ಸಂತನೊಬ್ಬನ ಹುಡುಕಾಟದ ಯಾತ್ರೆಯ ಕಥೆ. ಯೋಗರಾಜ ಭಟ್ಟರ 'ತುಂಡು ಹೈಕ್ಳು' ಚಿತ್ರದಲ್ಲೂ ಕಿಶೋರ್‌ಗೆ ಒಂದು ಮುಖ್ಯ ಪಾತ್ರವಿದೆ.

ಯೂನಿವರ್ಸಿಟಿಯಲ್ಲಿ ಬರಗೂರು ರಾಮಚಂದ್ರಪ್ಪನವರ ಶಿಷ್ಯನಾಗಿ, ಕನ್ನಡ ಎಂಎ ಮುಗಿಸಿದ ಕಿಶೋರ್, ಸ್ವಲ್ಪ ಕಾಲ ಕಾಲೇಜು ಹುಡುಗರಿಗೆ ಪಾಠ ಮಾಡಿದ್ದಿದೆ. ಈಗ ಸಿನಿಮಾ ನಟನೆಯ ಜತೆಗೆ ಸಾವಯವ ಕೃಷಿಯ ಹುಚ್ಚೂ ಹತ್ತಿಕೊಂಡಿದೆ. ಕಾಲೇಜಿನಲ್ಲಿ ಜಗಳ ಆಡುತ್ತಿದ್ದ ವಿಶಾಲಾಕ್ಷಿ ಪತ್ನಿಯಾಗಿ ಬಂದ ಮೇಲೆ ಹಿಡಿದದ್ದು ಈ ಹುಚ್ಚು. ಬನ್ನೇರುಘಟ್ಟದ ಬಳಿ ತೋಟ ಮಾಡಿ, ಮಲ್ಲೇಶ್ವರಂನಲ್ಲಿ ಮಳಿಗೆ ಇಟ್ಟುಕೊಂಡಿರುವ ಸಾವಯವ ಕೃಷಿಕ ಕಿಶೋರ್‌ರ ಅಗಾಧ ಪ್ರತಿಭೆಗೆ ತಕ್ಕ ಪಾತ್ರಗಳು ಕನ್ನಡದಲ್ಲಿ ಇನ್ನೂ ಸಿಕ್ಕಿಲ್ಲ. 'ರಾಕ್ಷಸ' ಸಿನಿಮಾದಲ್ಲಿ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ, ತಮಿಳಿನ 'ಪೊಲ್ಲಾದವನ್' ಚಿತ್ರಕ್ಕೆ ಅತ್ಯುತ್ತಮ ವಿಲ್ಲನ್ ಪ್ರಶಸ್ತಿ, ಮಲಯಾಳಂ ನ 'ತಿರುವಂಬಾಡಿ ತಂಬನ್' ಚಿತ್ರದಲ್ಲಿ ದಕ್ಷಿಣ ಭಾರತದ ಚಿತ್ರಗಳಲ್ಲಿ ವಿಲ್ಲನ್ ಪಾತ್ರ ಪ್ರಶಸ್ತಿಗೆ ಪೈಪೋಟಿ– ಹೀಗೆ ಕಿಶೋರ್‌ಗೆ ತೃಪ್ತಿ ಕೊಟ್ಟ ಕ್ಷಣಗಳೂ ಇವೆ.

ಮೊನ್ನೆ ಆಗಸ್ಟ್ 14ಕ್ಕೆ 40 ದಾಟಿದ ಕಿಶೋರ್, ಚಿತ್ರರಂಗಕ್ಕೆ ಬಂದು ಭರ್ತಿ 10 ವರ್ಷಗಳಾದವು. ಮೂರರಿಂದ ಕೆಳಕ್ಕಿಳಿಯದ ಈ ನಟ ಆರಕ್ಕೇರುವುದು ಯಾವಾಗ.. ಎನ್ನುವುದು ಅಭಿಮಾನಿಗಳ ಪ್ರಶ್ನೆ.

■ ಬಿಂದು